# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 589 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳಿಲ್ಲದೆ ಕೈಗಾರಿಕೆಗಳ ದೈನಂದಿನ ಕಾರ್ಯಾಚರಣೆಗೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪ್ರದೇಶದಲ್ಲಿ ಫುಟ್‌ಪಾತ್‌ಗಳ ನಿರ್ಮಾಣ ಮಾಡಲಾಗಿದೆಯೇ ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆಯೇ; ನಿರ್ಮಿಸಿದಲ್ಲಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ; ಬೀದಿ ದೀಪಗಳನ್ನು ಅಳವಡಿಸಲಾಗಿದೆಯೇ ; | ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳಿಲ್ಲದೇ ಕೈಗಾರಿಕೆಗಳ ದೈನಂದಿನ ಕಾರ್ಯಾಚರಣೆಗೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ **"ರಾಜ್ಯದಲ್ಲಿ ಉತ್ಪಾದನಾ ವಲಯವನ್ನು ಆಕರ್ಷಿಸುವ ಉದ್ದೇಶದಿಂದ ಪೀಣ್ಯದಲ್ಲಿ ಕೈಗಾರಿಕಾ ಟೌನ್ ಶಿಪ್ ನ್ನು ಸ್ಥಾಪಿಸಲಾಗುವುದು. ಇಲ್ಲಿ ಅಗತ್ಯ ಮೂಲಭೂತ ಸೌಲಭ್ಯವನ್ನು ರೂ.100 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು"** ಎಂದು ಘೋಷಿಸಲಾಗಿರುತ್ತದೆ. ಅದರಂತೆ, ಕೈಗಾರಿಕಾ ವಸಾಹತು ಪೀಣ್ಯ 1ನೇ ಹಂತವನ್ನು ಯೋಜನಾ ವೆಚ್ಚ ರೂ.50.00 ಕೋಟಿಗಳಲ್ಲಿ ಮತ್ತು ಕೈಗಾರಿಕಾ ಪ್ರದೇಶ ಪೀಣ್ಯ 4ನೇ ಫೇಸ್ ಅನ್ನು ಯೋಜನಾ ವೆಚ್ಚ ರೂ.49.53 ಕೋಟಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳ ಒಳಗೊಂಡಂತೆ ಆರ್.ಸಿ.ಸಿ. ಚರಂಡಿ, culvert ರಸ್ತೆಗಳ ಡಾಂಬರೀಕರಣ, ಫುಟ್‌ಪಾತ್‌ಗಳ ನಿರ್ಮಾಣ ಮತ್ತು ಅವಶ್ಯವಿರುವ ಕೆಲವು ರಸ್ತೆಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿಗಳನ್ನು ಒಳಗೊಂಡಂತೆ ಇತರೆ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (KSSIDC) ದಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಎರಡೂ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br><br>ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 17.00 ಕಿ.ಮೀ ಪಾದಾಚಾರಿ ಮಾರ್ಗವಿದ್ದು, ಇದರಲ್ಲಿ ಸುಮಾರು 5000.00 ಚ.ಮೀ ವಿಸ್ತೀರ್ಣಕ್ಕೆ ಪಾದಾಚಾರಿ ಮಾರ್ಗವನ್ನು ಅಭಿವೃದ್ಧಿಗೊಳಿಸಲಾಗಿರುತ್ತದೆ.<br><br>ಪೀಣ್ಯ ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ 08 ಸಂಖ್ಯೆಯ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಹಾಗೂ ನಿರ್ವಹಣೆ ಮಾಡಲಾಗುತ್ತಿದೆ.<br><br>ಪೀಣ್ಯ ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ 900 ಸಂಖ್ಯೆಯ ಬೀದಿ ದೀಪಗಳನ್ನು ಅಳವಡಿಸಲಾಗಿದೆ. |

<table>
<tr><td>ಆ)</td><td>ರಾಜ್ಯ ಸರ್ಕಾರವು 2013ನೇ ಸಾಲಿನಲ್ಲಿ ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕಾ ಪ್ರದೇಶಕ್ಕೆ "ELCITA" ಎಂಬ ಪ್ರಾಧಿಕಾರ ಸ್ಥಾಪಿಸಿದಂತೆ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ "ಕೈಗಾರಿಕಾ ಟೌನ್‌ಶಿಪ್ ಪ್ರಾಧಿಕಾರ" ರಚಿಸಲಾಗುವುದು ಎಂದು ಪ್ರತಿ ಬಾರಿ ಸದನದಲ್ಲಿ ಸರ್ಕಾರವು ಭರವಸೆ ನೀಡುತ್ತಾ ಬಂದಿದ್ದು, ಇಲ್ಲಿಯವರೆಗೆ ಈ ಪ್ರದೇಶದಲ್ಲಿ ಪ್ರಾಧಿಕಾರ ರಚಿಸಲು ಉಂಟಾಗುತ್ತಿರುವ ಅಡಚಣೆಗಳೇನು ;</td><td>ಪೀಣ್ಯದಲ್ಲಿ "ಕೈಗಾರಿಕಾ ಟೌನ್ ಶಿಪ್ ಪ್ರಾಧಿಕಾರ" ಸ್ಥಾಪಿಸುವ ಕುರಿತು ಇಲಾಖೆಯು Special Investment Region ಕಾಯ್ದೆಯನ್ನು ಅಧಿಸೂಚಿಸಿದ್ದು, ಅದರಂತೆ, ಪೀಣ್ಯ SIR ಪ್ರಸ್ತಾವನೆಯನ್ನು ಹಾಗೂ ಇತರೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನು ದಿನಾಂಕ: 13.11.2024ರ ಪತ್ರದ ಮೂಲಕ ಕೋರಲಾಗಿದೆ.</td></tr>
<tr><td>ಇ)</td><td>ಈ ಪ್ರದೇಶವು ಸುಮಾರು 40 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು, ಇಲ್ಲಿ ಹಲವಾರು ಬೃಹತ್, ಮಧ್ಯಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನೆಲೆಯಾಗಿರುತ್ತದೆ. ಆದರೆ ಸದರಿ ಪ್ರದೇಶದಲ್ಲಿ ಹೆಚ್ಚಾಗುತ್ತಿರುವ ತಾಪಮಾನದಿಂದ ಆರೋಗ್ಯ ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತಿದ್ದು, ಉತ್ಪಾದಕತೆಯನ್ನು ಕಡಿಮೆ ಮಾಡುತ್ತಿರುವುದು ನಿಜವೇ; ಇದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಪೀಣ್ಯ ಕೈಗಾರಿಕಾ ಪ್ರದೇಶವು ಅತಿ ದೊಡ್ಡ ಮತ್ತು ಹಳೆಯ ಕೈಗಾರಿಕಾ ಪ್ರದೇಶವಾಗಿದ್ದು, ಹಲವಾರು ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ನೆಲೆ ಹೊಂದಿರುತ್ತದೆ. ಈ ಕೈಗಾರಿಕಾ ಪ್ರದೇಶವು ಕೈಗಾರಿಕಾ ಮಾಲಿನ್ಯ ಮತ್ತು ವಾಹನಗಳ ಮಾಲಿನ್ಯದ ಹಿನ್ನೆಲೆಯಲ್ಲಿ ಗಂಭೀರವಾದ ಮಾಲಿನ್ಯ ಪ್ರದೇಶವೆಂದು ಪರಿಗಣಿಸಲ್ಪಟ್ಟಿದೆ.<br><br>ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾಲಿನ್ಯ ದಟ್ಟಣೆಯನ್ನು ಕಡಿಮೆ ಮಾಡುವ ಸಲುವಾಗಿ ಪರಿಸರದ ಗುಣಮಟ್ಟವನ್ನು ಮಾನದಂಡಗಳ ಮಿತಿಯೊಳಗೆ ಪುನರ್ ಸ್ಥಾಪಿಸಲು ಮತ್ತು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಹೆಚ್ಚಿಸಲು ಕ್ರಿಯಾ ಯೋಜನೆ ರೂಪಿಸಿರುತ್ತದೆ.</td></tr>
<tr><td>ಈ)</td><td>ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಬಹುತೇಕ ಕೈಗಾರಿಕೆಗಳು ಇಟಿಪಿ ಇಲ್ಲದೆ ತ್ಯಾಜ್ಯವನ್ನು ನೇರವಾಗಿ ಕೆರೆಗಳಲ್ಲಿ ಹಾಕುತ್ತಿದ್ದು, ಇದರಿಂದ ಪೀಣ್ಯ ಕೈಗಾರಿಕಾ ಪ್ರದೇಶದ ಸುತ್ತಮುತ್ತಲಿನ ಕೆರೆಗಳಾದ ಗಂಗಗೊಂಡನಹಳ್ಳಿ ಕೆರೆ, ದಾಸರಹಳ್ಳಿ ಕೆರೆ, ಕಲ್ಕೆರೆ ಕೆರೆ, ನಾಗಸಂದ್ರ ಕೆರೆ, ಶೆಟ್ಟಿಹಳ್ಳಿ ಕೆರೆಗಳು ಸಂಪೂರ್ಣವಾಗಿ ಕಲುಷಿತವಾಗಿದ್ದು ಇಂತಹ ಕೈಗಾರಿಕೆಗಳ ವಿರುದ್ಧ ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಫೇಸ್-I, II, III & IV ರಲ್ಲಿ ನಿರ್ಮಿಸಿದ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ನಿರ್ಮಿಸಲ್ಪಟ್ಟ ಸ್ಟೇಜ್-1, 2 & 3 ಗಳಲ್ಲಿರುವ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಖಾನೆಗಳ ವಿವರಗಳು ಈ ಕೆಳಕಂಡಂತಿವೆ:<br><br>
<table>
<tr><th>ವರ್ಗ</th><th>ಸೂಕ್ಷ್ಮ</th><th>ಸಣ್ಣ</th><th>ಮಧ್ಯಮ</th><th>ಬೃಹತ್</th><th>ಒಟ್ಟು</th></tr>
<tr><td>ಕೆಂಪು</td><td>-</td><td>100</td><td>09</td><td>22</td><td>131</td></tr>
<tr><td>ಕಿತ್ತಳೆ</td><td>01</td><td>03</td><td>20</td><td>53</td><td>267</td></tr>
<tr><td>ಹಸಿರು</td><td>08</td><td>715</td><td>68</td><td>90</td><td>881</td></tr>
<tr><td colspan="5">ಒಟ್ಟು</td><td>1,279</td></tr>
</table>
<br>ಈ ಮೇಲ್ಕಂಡ ಕಾರ್ಖಾನೆಗಳಿಂದ ಗೃಹ ಬಳಕೆ ರೊಚ್ಚು ನೀರು ಮತ್ತು ಕೈಗಾರಿಕಾ ಉತ್ಪನ್ನ ತಯಾರಿಕೆಯಿಂದ ಬರುವ ತ್ಯಾಜ್ಯ ನೀರು ಉತ್ಪತ್ತಿಯಾಗುತ್ತಿರುತ್ತದೆ. ವಿವರಗಳು ಈ ಕೆಳಕಂಡಂತಿವೆ:</td></tr>
</table>

| Cat | Sewage generated in KLD | Discharge details in KLD | | | Trade Effluent generated in KLD | Discharge details in KLD | |
|---|---|---|---|---|---|---|---|
| | | rated in STP | Discharged to BWSSB | Septic tank and soak pit | | Treated in ETP | Disposed to CETP |
| Red | 566.775 | 456.32 | 87.455 | 23 | 429.18 | 389.34 | 39.84 |
| Orange | 1281.98 | 483.04 | 710.67 | 88.27 | 965.33 | 955.02 | 10.316 |
| Green | 1297.5 | 315.58 | 816.21 | 165.71 | 0 | 0 | 0 |
| **Total** | **3146.25** | **1254.94** | **1614.33** | **276.98** | **1394.51** | **1344.3** | **50.15** |

ಒಟ್ಟು 192 ಕೈಗಾರಿಕೆಗಳಿಂದ ತ್ಯಾಜ್ಯ ನೀರು ಉತ್ಪತ್ತಿಯಾಗುತ್ತಿದ್ದು, ಇವುಗಳಲ್ಲಿ 47 ಕೈಗಾರಿಕೆಗಳು ತ್ಯಾಜ್ಯ ನೀರು ಉತ್ಪಾದನಾ ಸಂಸ್ಕರಣಾ ಘಟಕಗಳನ್ನು (ETP) ಹೊಂದಿದ್ದು, ತ್ಯಾಜ್ಯ ನೀರನ್ನು ಸಂಸ್ಕರಿಸುತ್ತಿರುತ್ತವೆ ಹಾಗೂ 145 ಕೈಗಾರಿಕೆಗಳು ಕಡಿಮೆ ಪ್ರಮಾಣದಲ್ಲಿ ತ್ಯಾಜ್ಯ ನೀರು ಉತ್ಪತ್ತಿಮಾಡುತ್ತಿದ್ದು, ಇವುಗಳು ಸಾಮಾನ್ಯ ತ್ಯಾಜ್ಯ ನಿರ್ವಹಣಾ ಘಟಕ (CETP) ಗಳಿಗೆ ತ್ಯಾಜ್ಯ ನೀರನ್ನು ವಿಲೇವಾರಿ ಮಾಡುತ್ತಿರುತ್ತವೆ.

ಮುಂದುವರೆದಂತೆ, ಪೀಣ್ಯ ಕೈಗಾರಿಕಾ ಪ್ರದೇಶದಿಂದ ಉತ್ಪತ್ತಿಯಾಗುವ ಗೃಹ ಬಳಕೆ ರೊಚ್ಚು ನೀರನ್ನು ವಿಸರ್ಜಿಸಲು BWSSB ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. BWSSB ಒಳಚರಂಡಿ ವ್ಯವಸ್ಥೆಯಿಲ್ಲದ ಕಡೆಗಳಲ್ಲಿ ಕೈಗಾರಿಕೆಗಳಿಂದ ಉತ್ಪತ್ತಿಯಾಗುತ್ತಿರುವ ಗೃಹಬಳಕೆ ರೊಚ್ಚು ನೀರನ್ನು Septic Tank & Soak Pit ಗಳಲ್ಲಿ ವಿಸರ್ಜಿಸಲಾಗುತ್ತಿದೆ.

ಮಂಡಳಿಯ ಪೀಣ್ಯ ಪ್ರಾದೇಶಿಕ ಕಛೇರಿಯಿಂದ 2016 ರಿಂದ 2021 ರವರೆಗೆ ಉತ್ಪಾದನಾ ತ್ಯಾಜ್ಯ ನೀರನ್ನು ಚರಂಡಿ / BWSSB ಯುಜಿಡಿ ಮುಖಾಂತರ ಹೊರಗೆ ವಿಸರ್ಜಿಸುತ್ತಿದ್ದ ಕೈಗಾರಿಕೆಗಳನ್ನು ಗುರುತಿಸಿದ್ದು, 07 ಕೈಗಾರಿಕೆಗಳಿಗೆ ಮಂಡಳಿಯಿಂದ ಮುಚ್ಚುವ ಆದೇಶವನ್ನು ನೀಡಲಾಗಿರುತ್ತದೆ. ತೆಗೆದುಕೊಂಡ ಕ್ರಮದ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.

ಪ್ರಸ್ತುತ ಕೈಗಾರಿಕೆಗಳನ್ನು ನಿಯಮಿತವಾಗಿ ಪರಿವೀಕ್ಷಣೆ ನಡೆಸುತ್ತಿದ್ದು, ಯಾವುದೇ ಕೈಗಾರಿಕಾ ಉತ್ಪಾದನಾ ತ್ಯಾಜ್ಯ ನೀರು ಪೀಣ್ಯ ಕೈಗಾರಿಕಾ ಪ್ರದೇಶದ ಕೈಗಾರಿಕೆಗಳಿಂದ ಸುತ್ತಮುತ್ತಲಿನ ಕೆರೆಗಳಿಗೆ ಸೇರುತ್ತಿರುವುದು ಪರಿವೀಕ್ಷಣಾ ಸಮಯದಲ್ಲಿ ಕಂಡು ಬಂದಿರುವುದಿಲ್ಲ.

ಪೀಣ್ಯ ಕೈಗಾರಿಕಾ ಪ್ರದೇಶದ ಸುತ್ತಮುತ್ತಲಿನ ಕೆರೆಗಳಾದ ಗಂಗೊಂಡನಹಳ್ಳಿ ಕೆರೆ, ದಾಸಹರಹಳ್ಳಿ ಕೆರೆ, ನಾಗಸಂದ್ರ ಕೆರೆ, ಕಲ್ಕೆರೆ ಕೆರೆ, ಶೆಟ್ಟಿಹಳ್ಳಿ ಕೆರೆಗಳಿಗೆ ವಸತಿ ಸಮುದಾಯಗಳಿಂದ ಕಲುಷಿತ ನೀರು ಸದರಿ ಐದು ಕೆರೆಗಳಿಗೆ ಸೇರುತ್ತಿರುವುದಲ್ಲದೆ, ಒಳಚರಂಡಿಗಳು, missing links ಗಳಿಂದಲೂ ಗೃಹಬಳಕೆ ತ್ಯಾಜ್ಯ ನೀರು ಹತ್ತಿರದ ಕೆರೆಗಳನ್ನು ಸೇರುತ್ತಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ಕೆರೆಗಳನ್ನು ಪರಿವೀಕ್ಷಣೆ ನಡೆಸಿ, ಸಂಬಂಧಪಟ್ಟ ಸಂಸ್ಥೆಗಳಾದ ಬಿಬಿಎಂಪಿ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇವರಿಗೆ ಕ್ರಮ ಕೈಗೊಳ್ಳುವಂತೆ ಪತ್ರ ಬರೆಯಲಾಗಿರುತ್ತದೆ.

| | | |
|---|---|---|
| | | ಕೆರೆಗಳ ನೀರಿನ ಮಾದರಿಗಳನ್ನು ಮಾಸಿಕವಾಗಿ ಸಂಗ್ರಹಿಸಿ, ಮಂಡಳಿಯ ಪ್ರಯೋಗಾಲಯಗಳಲ್ಲಿ ವಿಶ್ಲೇಷಿಸಲಾಗುತ್ತಿದೆ. ವಿಶ್ಲೇಷಣಾವರದಿಗಳ ಪ್ರಕಾರ ಕೆರೆಗಳ ನೀರಿನ ಗುಣಮಟ್ಟ ಈ ಕೆಳಕಂಡಂತಿದೆ;<br><br>1. ಗಂಗೊಂಡನಹಳ್ಳಿ ಕೆರೆ: E & D ಗುಣ ಮಟ್ಟವನ್ನು ಹೊಂದಿರುತ್ತದೆ.<br>2. ದಾಸರಹಳ್ಳಿ ಕೆರೆ: E & D ಗುಣ ಮಟ್ಟವನ್ನು ಹೊಂದಿರುತ್ತದೆ.<br>3. ನಾಗಸಂದ್ರ ಕೆರೆ: D ಗುಣ ಮಟ್ಟವನ್ನು ಹೊಂದಿರುತ್ತದೆ.<br>4. ಶೆಟ್ಟಿಹಳ್ಳಿ ಕೆರೆ: E & D ಗುಣ ಮಟ್ಟವನ್ನು ಹೊಂದಿರುತ್ತದೆ.<br>5. ಕಲ್ಕೆರೆ ಕೆರೆ: E & D ಗುಣಮಟ್ಟವನ್ನು ಹೊಂದಿರುತ್ತದೆ.<br><br>Class "D & E" ಅಂದರೆ (Class "D": Propagation of wild life, fisheries and Class "E": Irrigation, Industrial Cooling, controlled waste disposal).<br><br>ಮುಂದುವರೆದು ವಸತಿ ಪ್ರದೇಶಗಳ missing links ಗಳಿಂದ ತೆರೆದ ಚರಂಡಿಗೆ ಹರಿಯುತ್ತಿರುವಂತಹ ಗೃಹ ಬಳಕೆಯ ತ್ಯಾಜ್ಯ ನೀರನ್ನು ಸಂಸ್ಕರಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಗಂಗೊಂಡನಹಳ್ಳಿಗೆ ಸೇರುತ್ತಿರುವ ನಾಲೆಯ ಭಾಗದಲ್ಲಿ 10 MLD ಸಾಮರ್ಥ್ಯದ ಶುದ್ಧೀಕರಣ ಘಟಕವನ್ನು ಸ್ಥಾಪಿಸಲಾಗುತ್ತಿದೆ. |
| | | ದಾಸರಹಳ್ಳಿ ಕೆರೆಯ ಭಾಗದಲ್ಲಿ ಬಿಬಿಎಂಪಿವತಿಯಿಂದ 1 MLD ಸಾಮರ್ಥ್ಯದ ಘಟಕವು ಕಾರ್ಯನಿರ್ವಹಿಸುತ್ತಿದ್ದು, ಈ ಪ್ರದೇಶದ missing links ನಿಂದ ಬರುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ಸಂಸ್ಕರಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ 9 MLD ಸಾಮರ್ಥ್ಯದ ಘಟಕವನ್ನು ನಾಗಸಂದ್ರದ ಹತ್ತಿರ ಸ್ಥಾಪಿಸಲಾಗುತ್ತಿದೆ.<br><br>ಮುಂದುವರೆದಂತೆ, ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿಯೂ ಕೂಡ ಮಂಡಳಿಯ ವತಿಯಿಂದ ಸಾಮೂಹಿಕ ತ್ಯಾಜ್ಯ ನಿರ್ವಹಣಾ ಘಟಕ (CETP) ಯನ್ನು ಸ್ಥಾಪಿಸುವ ಕುರಿತು ತಾಂತ್ರಿಕ ಪ್ರಸ್ತಾವನೆ ಮತ್ತು ಲೈನ್ ಅಂದಾಜು ರೂ. 23 ಕೋಟಿಗೆ ಚೆನ್ನೈನ ಮೆ॥ ಹೆಚ್2ಒ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇಂದ ಪಡೆಯಲಾಗಿತ್ತು. ಆದಾಗ್ಯೂ, ಮಂಡಳಿಯು ಟೆಂಡರ್ ಸಂಖ್ಯೆ: 7541 ದಿನಾಂಕ: 10.2.2023 ರಂದು ಬೆಂಗಳೂರಿನ ಪೀಣ್ಯದಲ್ಲಿರುವ ಅರ್ಬನ್ ಇಕೋಪಾರ್ಕ್‌ನಲ್ಲಿ 125 ಕೆಎಲ್‌ಡಿ ಸಾಮರ್ಥ್ಯದ ಸಿಇಟಿಪಿಯನ್ನು ಸ್ಥಾಪಿಸಲು ಟೆಂಡರ್ ಆಹ್ವಾನಿಸಲಾಗಿತ್ತು. ಈ ನಿಟ್ಟಿನಲ್ಲಿ ಕೇವಲ ಒಂದೇ ಟೆಂಡರ್ ಸ್ವೀಕೃತವಾದ್ದರಿಂದ, ಈ ಟೆಂಡರ್ ಪ್ರಕ್ರಿಯೆಯನ್ನು ರದ್ದು ಪಡಿಸಲಾಯಿತು. ಈಗ ಮತ್ತೆ ಹೊಸ ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>ಈ ಎಲ್ಲಾ ಕೆರೆಗಳಿಗೆ missing links ನಿಂದ ಹರಿಯುತ್ತಿರುವ ಗೃಹ ತ್ಯಾಜ್ಯ ರೊಚ್ಚು ನೀರನ್ನು ಶುದ್ಧೀಕರಣ ಘಟಕಗಳಲ್ಲಿ |

| | | |
|---|---|---|
| | | ಶುದ್ಧೀಕರಣಗೊಳಿಸುವುದರಿಂದ ಕೆರೆಗಳ ಮಾಲಿನ್ಯವನ್ನು ತಡೆಗಟ್ಟಬಹುದಾಗಿರುತ್ತದೆ.<br><br>ಪಾಲಿಕೆಯ ವಶದಲ್ಲಿರುವ ದಾಸರಹಳ್ಳಿ ಕೆರೆ, ಶೆಟ್ಟಿಹಳ್ಳಿ ಕೆರೆ, ನಾಗಸಂದ್ರ ಕೆರೆ (ದೊಡ್ಡಬಿದರಕಲ್ಲು ಕೆರೆ) ಕೆರೆಗಳಿಗೆ ರಾಜಕಾಲುವೆ ಮುಖೇನ ಸೇರುವ ಕಾರ್ಖಾನೆ ತ್ಯಾಜ್ಯ / ಕೊಳಚೆ ನೀರು ಕೆರೆಗೆ ಸೇರದಂತೆ ಕೊಳಚೆ ನೀರಿನ ತಿರುಗಾಲುವೆ ನಿರ್ಮಿಸಲಾಗಿದ್ದು, ಕೆರೆಗೆ ಕಾರ್ಖಾನೆ ತ್ಯಾಜ್ಯ ಸೇರುತ್ತಿರುವುದಿಲ್ಲ ಎಂಬ ಮಾಹಿತಿಯನ್ನು ಒದಗಿಸಿದೆ. |

ಸಿಐ 44 ಸಿಎಸ್‌ಸಿ 2025

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.

**Annexure -1**

**Action taken on violating industries and present status**

| Sl No. | Name & address of the industry | Violations Noticed | NPD / Closure Order Issued | Closure Order revoked | Present Status |
|---|---|---|---|---|---|
| 1 | Eshwari Textile Processing<br>I Stage, Peenya Industrial Estate, Bengaluru 560058 | Discharging effluent into drainage system | 22.11.2018 | 01.01.2021 | Criminal Case filed against the industry. Industry is operating after compliance to CFO conditions. |
| 2 | Rajashri Industries<br>I Stage, Peenya Industrial Estate, Bengaluru 560059 | Discharging effluent into drainage system | 18.12.2019 | closed | Industry Closed |
| 3 | Kamalam Handlooms<br>IV Phase, Peenya Industrial Area, Bengaluru 560058 | Discharging effluent into drainage system | 05.02.2020 | 07.03.2020 | Industry Closed |
| 4 | Metro Fashions, No.A-313, A 314, II Stage, PIE, Bebgaluru | Discharging effluent into drainage system | 04.08.2022 | 07.03.2023 | Industry Closed |
| 5 | Amber Apparels, No.266, IV Phase, Peenya Industrial Area,Bengaluru | Discharging effluent into drainage system | 11.08.2023 | - | closure order still in force |
| 6 | SPS Industries, I Stage, Peenya Industrial Estate, Bengaluru 560058 | Discharging effluent in to Storm Water Drain | 03.10.2020 | - | Industry closed |
| 7 | Washport Processing, No.288, IV Phase, PIA, Bengaluru | Discharging effluent into drainage system | 10.11.2022 | 30.09.2023 | Criminal Case filed against the industry and Industry has been closed |
| 8 | TUV SUD South Asia<br>No.A-151/152, 2nd C Main, II Stage, PIE, Bangalore-560058 | Discharging effluent into drainage system | NPD issued on 30.01.2019 | - | Industry is operating after compliance to consent conditions. |
| 9 | Wonder Fex, (Old name Washwinn Processors),<br>No.270, IV Phase PIA, Bengaluru-560 058 | Discharging effluent into drainage system | NPD issued on 30.01.2019 | - | Industry is operating after compliance to consent conditions. |